ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಹೆರಿಗೆ ಭತ್ಯೆಯು ವಿತರಣೆ ಕುರಿತು.

೧೧೪೪. ಶ್ರೀ ಬಾಬುರೆಡ್ಡಿ ವಿ. ತುಂಗಳ್ (ಬೀಳಗಿ).— ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬಿಜಾಪುರ ಜಿಲ್ಲೆಯ ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಗೊಳಪಟ್ಟಿರುವ ಹಳ್ಳಿಗಳಲ್ಲಿ ೧೯೮೫-೮೬, ೧೯೮೬ ರಲ್ಲಿ ವಿತರಣೆಯಾದ ಹೆರಿಗೆ ಭತ್ಯೆ ಮೊತ್ತವೆಷ್ಟು ?

ಆ) ಈ ಹಣದ ವಿತರಣೆಯಲ್ಲಿ ದುರ್ವ್ಯವಹಾರವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ?

ಇ) ಹಾಗಿದ್ದರೆ ಸಂಬಂಧಿಸಿದ ವೈದ್ಯಾಧಿಕಾರಿಯು ಮೇಲೆ ಕ್ರಮ ಕೈಗೊಳ್ಳಲಾಗಿದೆಯೇ ?

ಶ್ರೀ ಜಿ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ೧೯೮೫-೮೬ನೇ ಸಾಲಿನಲ್ಲಿ ೪೨,೯೦೦-೦೦ ರೂಪಾಯಿಗಳು.
೧೯೮೬-೮೭ನೇ ಸಾಲಿನಲ್ಲಿ ೧,೮೯,೯೦೦-೦೦ ರೂಪಾಯಿಗಳು.

ಆ) ಬಂದಿದೆ.

ಇ) ವಿಚಾರಣೆ ನಡೆಯುತ್ತಿದೆ. ವಿಚಾರಣೆ ಮುಗಿದ ನಂತರ ಕ್ರಮ ಕೈಗೊಳ್ಳಲಾಗುವುದು.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಸನ್ಮಾನ್ಯ ಅಧ್ಯಕ್ಷರೇ, ಸನ್ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ೧೯೮೫-೮೬ನೇ ಸಾಲಿನಲ್ಲಿ ಬಿಜಾಪುರ ಜಿಲ್ಲೆಯ ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ೪೨,೯೦೦-೦೦ ರೂಪಾಯಿಗಳ ಹೆರಿಗೆ ಭತ್ಯೆ ಮತ್ತು ೧೯೮೬-೮೭ ರಲ್ಲಿ ೧,೮೯,೯೦೦-೦೦ ರೂಪಾಯಿಗಳ ಹೆರಿಗೆ ಭತ್ಯೆ ಕೊಟ್ಟಿದೆ ಎನ್ನುವಂಥ ಮಾತನ್ನು ಹೇಳಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಮಂತ್ರಿಗಳಲ್ಲಿ ಕ್ಲಾರಿಫಿಕೇಷನ್ ಕೇಳುತ್ತೇನೆ. ಏನೆಂದರೆ, ಈ ರೀತಿ ಒಂದು ಲಕ್ಷ ೮೯ ಸಾವಿರದ ೯೦೦ ರೂಪಾಯಿಗಳು ಮತ್ತು ೪೨ ಲಕ್ಷದ ೯೦೦ ರೂಪಾಯಿಗಳನ್ನು ಒಂದೇ ಒಂದು ಆರೋಗ್ಯ ಕೇಂದ್ರಕ್ಕೆ ಬರಬೇಕಾದರೆ ಇದರ ಹಿಂದೆ ಅಧಿಕಾರಿಗಳ ಪಿತೂರಿ ಏನಾದರೂ ಇದೆಯೇ ಎಂದು ? ಇಷ್ಟೊಂದು ದೊಡ್ಡ ಪ್ರಮಾಣದಲ್ಲಿ ಒಂದೇ ಒಂದು ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹಣವನ್ನು ಕೊಡಲಿಕ್ಕೆ ಕಾರಣ ಏನು ? 'ಆ' ಪ್ರಶ್ನೆಯಲ್ಲಿ ಈ ಹಣದ ವಿತರಣೆಯಲ್ಲಿ ದುರ್ವ್ಯವಹಾರವಾಗಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ 'ಬಂದಿದೆ' ಎಂದು ಹೇಳಿದ್ದಾರೆ. ಈ ದುರ್ವ್ಯವಹಾರದ ಕುರಿತು ಹಲವಾರು ಹಳ್ಳಿಗಳಿಗೆ, ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಹೋಗಿ ಜನರನ್ನು ಕೇಳಿದಾಗ ನಮಗೆ ಯಾರಿಗೂ ದುಡ್ಡು ಕೊಟ್ಟಿಲ್ಲ, ನಮ್ಮ ಹೆಸರಿನಲ್ಲಿ ಖರ್ಚು ಹಾಕಿದ್ದಾರೆ ಎಂದು ಸಾಕಷ್ಟು ಜನರು ದೂರನ್ನು ಕೊಟ್ಟಿದ್ದಾರೆ. ನಾನು ತಮ್ಮ ಮುಖಾಂತರ ಮಾನ್ಯ ಸಚಿವರನ್ನು ಕೇಳಿ ಕೊಳ್ಳುತ್ತೇನೆ. ಇದು ಸರ್ಕಾರ ಒಳ್ಳೆಯ ಉದ್ದೇಶಕ್ಕಾಗಿ ಕೊಡತಕ್ಕಂಥ ಹೆರಿಗೆ ಭತ್ಯೆ. ಇದಕ್ಕೆ ಅಲ್ಲಿ ಕತ್ತರಿ ಹಾಕುವಂಥ ಕೆಲಸ ನಡೆದಿದೆ. ಸಾವಳಗಿಯಲ್ಲಿ ನಡೆದಂತೆ ಬೇರೆ ಎಲ್ಲಾದರೂ ನಡೆದಿದೆಯೇ ಹೇಗೆ ? ಅಲ್ಲಿ ನಡೆದಿರತಕ್ಕಂಥ ದುರ್ವ್ಯವಹಾರ ಅಪರ ಗಮನಕ್ಕೆ ಬಂದಿದೆಯೇ ಎಂದು ಕೇಳಿದ್ದಕ್ಕೆ ಬಂದಿದೆ ಎಂದು ಹೇಳಿದ್ದಾರೆ. ಅವರ ಗಮನಕ್ಕೆ ಬಂದಿದ್ದರೆ ೧೯೮೫-೮೬ ಹಾಗೂ ೧೯೮೬-೮೭ನೇ ಸಾಲಿನಲ್ಲಿ ಅಲ್ಲಿದ್ದಂಥ ಮುಖ್ಯ ವೈದ್ಯಾಧಿಕಾರಿ ಮೇಲೆ ಯಾವರೀತಿಯ ಕಠಿಣ ಕ್ರಮ ತೆಗೆದುಕೊಳ್ಳುತ್ತೀರಿ? ಒಂದುವೇಳೆ ಈಗಾಗಲೇ ಕ್ರಮ ತೆಗೆದುಕೊಂಡಿದ್ದರೆ ಯಾವ ಕ್ರಮ ತೆಗೆದುಕೊಂಡಿದ್ದೀರಿ ? ಮುಂದೆ ಈರೀತಿ ಆಗಬಾರದು, ತಪ್ಪಿತಸ್ಥರಿಗೆ ಸರಿಯಾದ ಶಿಕ್ಷೆ ಮಾಡಬೇಕು ಎಂದು ಮಾನ್ಯ ಸಚಿವರಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಜಿ. ಬಸವಣ್ಣಪ್ಪ.— ಹೆರಿಗೆ ಭತ್ಯ ಕೊಡತಕ್ಕಂಥ ಕಾರ್ಯಕ್ರಮ ಒಳ್ಳೆಯ ಕಾರ್ಯಕ್ರಮ, ಇದು ೧-೪-೧೯೮೪ ರಿಂದ ಜಾರಿಗೆ ಬಂದಿದೆ. ಕೃಷಿ ಕಾರ್ಮಿಕರಲ್ಲಿ ಫಲಾನುಭವಿಗಳನ್ನು ಗುರುತು ಮಾಡಿ ಹಣ ವಿತರಣೆ ಮಾಡುತ್ತೇವೆ. ಅದರ ಪ್ರಕಾರ ಸಾವಳಗಿ ಪ್ರಾಥಮಿಕ ಆರೋಗ್ಯ ಕೇಂದ್ರದ ವ್ಯಾಪ್ತಿಯಲ್ಲಿರುವ ಹಳ್ಳಿಗಳಲ್ಲಿ ೧೯೮೫-೮೬ನೇ ಸಾಲಿನಲ್ಲಿ ೪೨,೯೦೦-೦೦ ರೂಪಾಯಿಗಳು ೧೯೮೬-೮೭ನೇ ಸಾಲಿನಲ್ಲಿ ೧,೮೯,೯೦೦-೦೦ ರೂಪಾಯಿಗಳು ಖರ್ಚಾಗಿದೆ ಆದರೆ ಇದರಲ್ಲಿ ಅವ್ಯವಹಾರ ನಡೆದಿದೆ, ಅಲ್ಲಿರತಕ್ಕಂಥ ಮೆಡಿಕಲ್ ಆಫೀಸರ್ ಅವ್ಯವಹಾರ ಮಾಡಿದ್ದಾರೆ ಎಂದು ಮಾನ್ಯ ಸದಸ್ಯರು ಸರ್ಕಾರದ

ಗಮನ ಸೆಳೆದಿದ್ದಾರೆ. ಈಗಾಗಲೇ ಡಿಪ್ಟಿಕ್ಟ್ ಹೆಲ್ತ್ ಆಫೀಸರಿಗೆ ನಾವು ಆದೇಶ ಕೊಟ್ಟಿದ್ದೇವೆ, ಅವರು ವಿಚಾರಣೆ ಮಾಡುತ್ತಾ ಇದ್ದಾರೆ, ಅದು ಈಗ ವಿಚಾರಣಾ ಹಂತದಲ್ಲಿದೆ. ಅವರು ಯಾರೇ ಆಗಲಿ, ಕಾನೂನು ಪ್ರಕಾರ ಕ್ರಮ ತೆಗೆದುಕೊಳ್ಳುತ್ತೇವೆ.

ಶ್ರೀ ಬಾಬುರೆಡ್ಡಿ ವಿ. ತುಂಗಳ್.—ಈ ಹೆರಿಗೆ ಭತ್ಯವನ್ನು ನಮ್ಮ ಸರ್ಕಾರ ಕೃಷಿ ಕಾರ್ಮಿಕರ ಕುಟುಂಬಕ್ಕೆ ಒಳ್ಳೆಯ ಉದ್ದೇಶಕ್ಕಾಗಿ ಕೊಟ್ಟಿದ್ದಾರೆ. ಆದರೆ ಅಲ್ಲಿ ಗಂಭೀರವಾದ ಆರೋಪ ಕಂಡು ಬಂದಿದೆ ಎಂದು ಮಾನ್ಯ ಸಚಿವರೇ ಒಪ್ಪಿಕೊಂಡಿರುತ್ತಾರೆ. ಆದುದರಿಂದ ಇದರ ಬಗ್ಗೆ ಅತ್ಯಂತ ತೀವ್ರವಾಗಿ ವಿಚಾರಣೆ ಮಾಡಿ ದುರ್ವ್ಯವಹಾರ ಮಾಡಿದ ಅಧಿಕಾರಿ ಮೇಲೆ ಉಗ್ರ ಕ್ರಮ ಜರುಗಿಸ ಬೇಕೆಂದು ಕೇಳಿಕೊಳ್ಳುತ್ತೇನೆ.

SRI G. BASAVANAPPA.—I am one with the hon. Member. ಇದರ ಬಗ್ಗೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಅಧ್ಯಕ್ಷರು.—ಬಿ. ಆರ್. ನೀಲಕಂಠಪ್ಪನವರೇ, ತಮ್ಮ ಪ್ರಶ್ನೆಗೆ ಮಂತ್ರಿಗಳು ಟೈಂ ಕೇಳಿದ್ದಾರೆ.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಮಾನ್ಯ ಅಧ್ಯಕ್ಷರೇ, ಲಿಖಿತ ಮೂಲಕ ಉತ್ತರಿಸಲಾದ ಸದರಿ ಪಟ್ಟಿಯನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.—ಸಭೆಯ ಮುಂದಿಡಲಾಯಿತು.

ಭೂ ಸುಧಾರಣಾ ಅಪೀಲು ನ್ಯಾಯಾಧಿಕರಣ

೧೨೩೧. ಶ್ರೀ ಕೆ. ಎಸ್. ಶ್ರೀನಿವಾಸ್ (ಶಿವಮೊಗ್ಗ).—ಮಾನ್ಯ ಕಂದಾಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ರಾಜ್ಯದಲ್ಲಿ ಈವರೆಗೆ ಸ್ಥಾಪಿಸಿರುವ ಭೂ ಸುಧಾರಣಾ ಅಪಿಲೇಟ್ ಟ್ರಿಬ್ಯೂನಲ್‌ಗಳ ಸಂಖ್ಯೆ ಎಷ್ಟು, ಹಾಗೂ ಅವು ಯಾವ ಯಾವ ಸ್ಥಳಗಳಲ್ಲಿವೆ ?

ಆ) ಸದರಿ ಅಪಿಲೇಟ್ ಟ್ರಿಬ್ಯೂನಲ್‌ಗಳಲ್ಲಿ ಈವರೆಗೆ ದಾಖಲು ಆಗಿರುವ ಮೇಲ್ಮನವಿಗಳ ಸಂಖ್ಯೆ ಎಷ್ಟು ?

ಇ) ಸದರಿ ದಾಖಲು ಆಗಿರುವ ಮೇಲ್ಮನವಿಗಳಲ್ಲಿ ತೀರ್ಮಾನವಾಗಿರುವ ಪ್ರಕರಣಗಳ ಸಂಖ್ಯೆ ಎಷ್ಟು ?

ಈ) ತೀರ್ಮಾನವಾಗಿರುವ ಮೇಲ್ಮನವಿಗಳಲ್ಲಿ ಗೇಣಿದಾರರ ಪರವಾಗಿ ಆಗಿರುವ ತೀರ್ಮಾನಗಳ ಸಂಖ್ಯೆ ಎಷ್ಟು, ಹಾಗೂ ವಿರುದ್ಧವಾದ ತೀರ್ಮಾನಗಳ ಸಂಖ್ಯೆ ಎಷ್ಟು ?

ಶ್ರೀ ಎಸ್. ಆರ್. ಬೊಮ್ಮಾಯಿ (ಕಂದಾಯ ಮಂತ್ರಿಗಳು).—

ಅ) ರಾಜ್ಯದಲ್ಲಿ ಈವರೆಗೆ ಸ್ಥಾಪಿಸಿರುವ ಭೂ ಸುಧಾರಣಾ ಅಪಿಲೇಟ್ ಟ್ರಿಬ್ಯೂನಲ್‌ಗಳು ೩೨. ಅವುಗಳ ಕೇಂದ್ರ ಸ್ಥಾನ ಈ ಕೆಳಕಂಡ ಸ್ಥಳಗಳಲ್ಲಿವೆ,

ಬೆಂಗಳೂರು (೨), ತಮಕೂರು (೨), ಕೋಲಾರ, ಶಿವಮೊಗ್ಗ, ಚಿತ್ರದುರ್ಗ, ಮೈಸೂರು, ಚಿಕ್ಕಮಗಳೂರು, ಹಾಸನ, ಮಂಡ್ಯ, ಮಡಿಕೇರಿ, ಮಂಗಳೂರು, ಗುಲ್ಬರ್ಗಾ, ರಾಯಚೂರು, ಬೀದರ್, ಬಳ್ಳಾರಿ, ಬೆಳಗಾವಿ, ಬಿಜಾಪುರ, ಧಾರವಾಡ, ಕಾರವಾರ, ಚಿಕ್ಕಬಳ್ಳಾಪುರ, ಸಾಗರ, ಚಿಕ್ಕೋಡಿ, ಬಾಗಲಕೋಟೆ, ಹಾವೇರಿ, ಸಿರಸಿ, ಹೊಸಪೇಟೆ, ಪುತ್ತೂರು, ಉಡುಪಿ, ಕುಂದಾಪುರ ಮತ್ತು ನಂಜನಗೂಡು.